ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ಅಯೋಧ್ಯಾ ದರ್ಶನ

ಅಯೋಧ್ಯಾ ಧಾಮ್, ಮಹರ್ಷಿ ವಾಲ್ಮೀಕಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹಿಡಿದು, ಅಯೋಧ್ಯೆಯ ಬೀದಿ ಬೀದಿಗಳಲೆಲ್ಲಾ ಕಂಗೊಳಿಸುತ್ತಿರುವ ರಾಮಾಯಣದ ವರ್ಣಚಿತ್ರಗಳು, ರಾಮನ ಧ್ವಜಗಳು, ಪಾದುಕೆಗಳು, ವಿಗ್ರಹಗಳು, ರಾಮ್ ದೂತ್ ಪಾಲೆಸ್, ನಿರ್ವಾಣ ಇನ್, ವೇದಾ ಪಾಲೆಸ್, ದಶರಥ್ ಇನ್, ರಾಮಾಲಯ, ರಘುವೀರ್ ಸದನ್, ದಿವ್ಯ ದರ್ಶನ್, ಸಿಯಾ ರೆಸಾರ್ಟ್, ರಘುವರ ಕೃಪಾ, ಶಬರಿ ರಸೋಯಿ ಮುಂತಾದ ನಾಮಫಲಕಗಳು, ಶ್ರೀರಾಮಾಯಣದ ದೃಶ್ಯಗಳ ಬೊಂಬೆಯಾಟಗಳು, ಭಕ್ತರ ಹಣೆಯಲ್ಲಿ ವಿರಾಜಿಸುತ್ತಿರುವ ರಾಮನ ನಾಮ.

ಅಂತಾ ರಾಮಮಯಂ, ಜಗಮಂತಾ ರಾಮಮಯಂ.






Ayodya Airport




14
IndiGo
DESTINATION
AYODHYA DHAM, MAHA
TIME
14:20
FLIGHT
6E 5116
STATUS
Goldmedal
SWITCH TO THE AMAZING

ಮಧುರವಾದ "**ರಾಮ**" ಎಂಬ ಎರಡಕ್ಷರದ ದಿವ್ಯ ಶಬ್ದವನ್ನು, ಮಧುರವಾದ ತನ್ನ ಕಂಠದಿಂದ ಲೋಕಕ್ಕೆಲ್ಲಾ ಇಂಪಾಗಿ ಕೇಳಿಸುತ್ತಾ, ಕವಿತೆ ಎಂಬ ವೃಕ್ಷದ ಉತ್ತುಂಗ ಶಾಖೆಯೊಂದರ ಮೇಲೆ ಕುಳಿತು ಹಾಡುತ್ತಿದೆ, ವಾಲ್ಮೀಕಿ ಎಂಬ ಕೋಗಿಲೆ.

ಕೂಜಂತಂ ರಾಮರಾಮೇತಿ ಮಧುರಂ ಮಧುರಾಕ್ಷರಂ ।

ಆರುಹ್ಯ ಕವಿತಾ ಶಾಖಂ ವಂದೇ ವಾಲ್ಮೀಕಿ ಕೋಕಿಲಂ ॥

ಯಃ ಪಿಬನ್ ಸತತಂ ರಾಮಚರಿತಾಮೃತ ಸಾಗರಮ್ ।

ಅತೃಪ್ತಸ್ತಂ ಮುನಿಂ ವಂದೇ ಪ್ರಾಚೇತಸಮಕಲ್ಮಷಮ್ ॥

ನಮ್ಮ ಸಂಸ್ಕೃತಿಯ ಬೇರುಗಳನ್ನು ಕಥೆಯ ಸುಂದರ ಚೌಕಟ್ಟಿನಲ್ಲಿ ಹಿಡಿದಿಟ್ಟು ನಿತ್ಯ ನೂತನವಾಗಿಸಿದ ಚತುರ, ಕವಿವರ, ಧರ್ಮದ ಮಹಾದೃಷ್ಟಾರ, ಬ್ರಹ್ಮವರಪ್ರಸಾದಿ, ವಾಲ್ಮೀಕಿ.

ಯಾವತ್ ಸ್ಥಾಸ್ಯಂತಿ ಗಿರಯಃ ಸರಿತಶ್ಚ ಮಹೀತಲೇ ।

ತಾವದ್ರಾಮಾಯಣ ಕಥಾ ಲೋಕೇಷು ಪ್ರಚರಿಷ್ಯತಿ ।

ಯಾವದ್ ರಾಮಸ್ಯ ಚ ಕಥಾ ತ್ವತ್ಕೃತಾ ಪ್ರಚರಿಷ್ಯತಿ ॥

ರಾಮನೂ ಸೇರಿದಂತೆ ರಾಮಾಯಣದ ಉದಾತ್ತ ಪಾತ್ರಗಳಾದ ಸೀತೆ, ಭರತ, ಲಕ್ಷ್ಮಣ, ಶಬರಿ, ಹನುಮಾನ್ – ಇವರೆಲ್ಲರ ಜೀವನವೂ ಒಂದು ತಪಸ್ಸು. ಸ್ವತಃ ಕವಿ ವಾಲ್ಮೀಕಿಯೂ ತಪಸ್ಸಿನಿಂದ ರೂಪಿತವಾದ ವ್ಯಕ್ತಿತ್ವವೇ. ಅವರ ರಾಮಾಯಣ ಕಾವ್ಯವಾದರೂ ತಪಸ್ಸಿನ ಶಿಶುವೇ.

ರಾಮಾಯಣ – ರಾಮ ಚಲಿಸಿದ ಹಾದಿ, ಭಾರತದ ಆದಿಕವಿ ವಾಲ್ಮೀಕಿ. ಆದಿಕಾವ್ಯ ಶ್ರೀಮದ್ರಾಮಾಯಣ, ತಪಸ್ಸು ಎಂಬ ದ್ರವ್ಯವನ್ನೇ ಉಪಜೀವಿಸುವ ಮಹಾಕಾವ್ಯ. ಈ ಪ್ರಥಮ ಕಾವ್ಯದ ಭೂಮಿಕೆ ಅಯೋಧ್ಯೆ. ಅಯೋಧ್ಯಾಪುರ ಅಜರಾಮರ.



ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಹ್ಯವಂತಿಕಾ ।

ಪುರೀ ದ್ವಾರಾವತೀ ಚೈವ ಸಪ್ತೈತಾ ಮುಕ್ತಿದಾಯಕಾಃ ॥

ಮೋಕ್ಷದಾಯಕ ತೀರ್ಥಕ್ಷೇತ್ರಗಳ ಪಟ್ಟಿಯಲ್ಲಿ ಮೊದಲನೆಯದೇ ಅಯೋಧ್ಯೆ. ಮೂಲಾಧಾರಾದಿ ಸಹಸ್ರಾರಾಂತ ಸಪ್ತ ಚಕ್ರಗಳಿಗೆ ಸಂಕೇತಗಳಾಗಿರುವ ಈ ಉಪಾಸನಾ ಭೂಮಿಕೆಗಳಲ್ಲಿ ಮೂಲಾಧಾರವು ಕಾಂಚಿಯಾದರೆ ಅಯೋಧ್ಯೆ ಸಹಸ್ರಾರ. ಚಕ್ರರಾಜನಂತಿರುವ ಸಹಸ್ರಾರ, ಸರ್ವವ್ಯಾಪಕನಾದ ಪರಬ್ರಹ್ಮ ಸ್ಥಾನ.

ಅಷ್ಟಾ ಚಕ್ರಾ ನವದ್ವಾರಾ । ದೇವಾನಾಂ ಪೂರಯೋಧ್ಯಾ ।

ತಸ್ಯಾಗ್ಂ ಹಿರಣ್ಮಯ ಕೋಶಃ । ಸ್ವರ್ಗೋ ಲೋಕೋ ಜ್ಯೋತಿಷಾವೃತಃ ॥

ಎಂಬುದು ವೇದಮಂತ್ರ. ವೇದಗಳೆಷ್ಟು ಪ್ರಾಚೀನವೋ ಅದಕ್ಕೂ ಹಿಂದೆ ಹೋಗುತ್ತದೆ ಅಯೋಧ್ಯೆಯ ಪಳಮೆ. ಬರಿಯ ಹೆಸರಲ್ಲ, ಬರಿಯ ನಗರವಲ್ಲ, ಅಯೋಧ್ಯೆ ಒಂದು ಜೀವಂತ ಸಂಸ್ಕೃತಿ. ಭಾರತೀಯ ಪರಂಪರೆಯ ಸಮರ್ಥ ಪ್ರತಿನಿಧಿ. ಕಾರಣಿಕ ಕ್ಷೇತ್ರ. ಅಯೋಧ್ಯೆಯ ಕೆಳಗೆ ವಿಶಾಲವಾದ ಎಂಟು ದಿವ್ಯ ಬೃಹದಾಕಾರದ ಸುದರ್ಶನ ಸಾಲಗ್ರಾಮಗಳುಂಟೆಂಬುದು ಅಲ್ಲಿಯ ನಿವಾಸಿಗಳ ಅಭಿಮತ. ಅಯೋಧ್ಯೆಯ ಸರಹದ್ದಿನಲ್ಲಿರುವ ದಶರಥ ಮಹಾರಾಜರು ಪುತ್ರಕಾಮೇಷ್ಟಿ ಯಜ್ಞ ನಡೆಸಿದ ಮಖಭೂಮಿಯ ಚಿಟಿಕೆ ಮಣ್ಣನ್ನು ಬಾಯಲ್ಲಿ ಹಾಕಿಕೊಂಡರೂ ಸಾಕು, ಸತ್ಸಂತಾನ ಆಗುತ್ತದೆಯೆಂಬುದು ಇಲ್ಲಿಯ ನಂಬಿಕೆ.

**ಅಯೋಧ್ಯೆ:** ಶ್ರೀರಾಮ, ಭರತ, ಲಕ್ಷ್ಮಣ, ಶತೃಘ್ನರ ಜನನ, ಶ್ರೀರಾಮನ ವನಗಮನ, ಭರತನಿಂದ ನಡೆದ ಶ್ರೀರಾಮ ಪಾದುಕಾ ಪಟ್ಟಾಭಿಷೇಕ, ಶ್ರೀರಾಮ ಪಟ್ಟಾಭಿಷೇಕ, ರಾಮರಾಜ್ಯ ಸ್ಥಾಪನೆ, ಶ್ರೀರಾಮನ ಮಹಾಪ್ರಸ್ಥಾನ ಮುಂತಾದ ದಿವ್ಯ ಸಂಘಟನೆಗಳ ಜೀವಂತ ಸಾಕ್ಷಿ.

ಮಹಾಕವಿ ಶ್ರೀತುಲಸೀದಾಸರು ಸಾಕ್ಷಾತ್ ಪರಮೇಶ್ವರರ ಆನತಿಯ ಮೇರೆಗೆ ಸತತವಾಗಿ ಎರಡು ವರ್ಷ, ಏಳು ತಿಂಗಳು, ಇಪ್ಪತ್ತಾರು ದಿವಸಗಳಲ್ಲಿ ಶ್ರೀರಾಮಚರಿತಮಾನಸವನ್ನು ರಚಿಸಿದ ದಿವ್ಯಧಾಮ. ಅಯೋಧ್ಯೆಯ ವಟವೃಕ್ಷದ ಬುಡದಲ್ಲಿಯೇ ತುಲಸೀದಾಸರಿಗೆ ಮಹರ್ಷಿ ಭರಧ್ವಾಜರ ಮತ್ತು ಯಾಜ್ಞವಲ್ಕ್ಯರ ದರ್ಶನ.

“ಚಂದುರು ವರ್ಣನಿ ಯಂದ ಚಂದಮುನ ಹೃದಯಾರವಿಂದಮುನ ಜೂಚಿ ಬ್ರಹ್ಮಾನಂದ ಮನುಭವಿಂಚುವಾರು”,

“ಸಾಮಗಾನಲೋಲ ಮನಸಿಜ ಲಾವಣ್ಯ ಧನ್ಯ ಮೂರ್ಧನ್ಯುಲು”

ಎಂದರೋ ಮಹಾನುಭಾವುಲು, ಅಂದರಿಕೀ ವಂದನಮು.

ಸಾಲಗ್ರಾಮಗಳ ಮೇಲೆ ಇರುವ ಪರಮಾತ್ಮನ ನಿವಾಸ ಸ್ಥಾನವಾದ ಪವಿತ್ರ ಅಯೋಧ್ಯೆಯನ್ನು ಆವರಿಸಿರುವ ಅಮೃತ ತೀರ್ಥ ಸರಯೂ.



ಅಯೋಧ್ಯಾ ನಾಮ ನಗರೀ ತತ್ರಾಸೀಲ್ಲೋಕ ವಿಶ್ರುತಾ ।


ಕೋಸಲೋ ನಾಮ ಮುದಿತಃ ಸ್ಥಿತೋ ಜನಪದೋ ಮಹಾನ್ ॥

ನಿವಿಷ್ಟಃ ಸರಯೂ ತೀರೇ ಪ್ರಭೂತ ಧನಧಾನ್ಯವಾನ್ ॥

ವಸಿಷ್ಟ ಮಹರ್ಷಿಗಳ ವಿನಂತಿಯನ್ನು ಮನ್ನಿಸಿ ಮಾನಸ ಸರೋವರದಿಂದ ಬಂದು ಅಯೋಧ್ಯೆಯಲ್ಲಿ ನದಿಯಾಗಿ ಹರಿದ ಸರಯೂ. ಅಯೋಧ್ಯೆಯನ್ನು ಬಳಸಿರುವ ಸರಯೂ ತೀರ. ಗಗನಾಧಿಪ ಸತ್ಕುಲ ರಾಜರಾಜೇಶ್ವರನು ನನ್ನ ವಂಶಜಾತನೇ ಎಂದು ಹೆಮ್ಮೆಯಿಂದ ಅಸ್ತಮಿಸುತ್ತಿರುವ ಸೂರ್ಯ. ರಾಮನ ವದನಾರವಿಂದ ನನ್ನಂತೆಯೇ ಇದೆ ಎಂದು ಬೀಗುತ್ತಾ ಉದಯಿಸುತ್ತಿರುವ ತುಂಬು ಚಂದ್ರ. ಸುಂದರ ಸಾಯಂ ಸಂಧ್ಯೆ. ತವಕದಿಂದ ಅಂಕು ಡೊಂಕಾಗಿ ಸಾಗುತ್ತಾ ನಿರ್ಮಲ ಜಲದಿಂದ ಶೋಭಿಸುತ್ತಿರುವ ಮಾನಸ ನಂದಿನೀ ಸರಯೂ, ನದಿಯ ಮೇಲೆ ತೇಲುತ್ತಿರುವ ಭಕ್ತರಿಂದ ಪ್ರಜ್ವಲಿಸಲಾದ ದೀಪಗಳ ಸಾಲು ಸಾಲು, ನೀರಿನಲ್ಲಿ ಪ್ರತಿಫಲಿಸುತ್ತಿರುವ ದೀಪದ ಕಾಂತಿ, ಐದು ಪುರೋಹಿತರು, ಐದು

ಅಲಂಕೃತ ಮಂಟಪಗಳಲ್ಲಿ ಮಾಡುತ್ತಿರುವ ಮಂತ್ರಗಳ ಘೋಷಣೆ, ಶಂಖಾನಾದ, ಧೂಪದ ವಾಸನೆ, ಛತ್ರ ಚಾಮರ ಸೇವೆಗಳನ್ನೊಳಗೊಂಡ ಪೂಜಾ ಸಂಭ್ರಮ ಮಾತಾ ಸರಯೂಗೆ.









ನಮಾಮಿ ಸರಯೂ ತವ ಪಾದ ಪಂಕಜಂ । ಸುರಾಸುರೈರ್ವಂದಿತ ಪಾದ ಪೀಠಮ್ ।

ಭಕ್ತಿಶ್ಚ ಮುಕ್ತಿಶ್ಚ ದದಾಸಿ ನಿತ್ಯಂ । ಭಾವಾನುಸಾರೇಣ ಸದಾ ವರಾಣಾಮ್ ॥

ಎಂಬುದು ಸರಯೂ ಮಾತೆಯ ಸ್ತುತಿ. ಆಸ್ತಿಕರ ಪ್ರಾರ್ಥನೆ.

ಕಲ್ಮಷಗಳನ್ನು ತೊಳೆದು, ಪಂಡಿತರಿಂದ ಮಂಡಿತಳಾಗಿ, ಅಜ್ಞಾನ ನಿವಾರಿಸುವ ಮಾತೆ ಸರಯೂ.



ಅಲಕ್ಷ ಲಕ್ಷ ಲಕ್ಷ ಪಲಕ್ಷ ಸಾರಸಾಯುಧಂ ।

ತತಸ್ತು ಜೀವಜಂತು ತಂತು ಭುಕ್ತಿ ಮುಕ್ತಿದಾಯಕಂ ।

ಸಬಿಂದು ಸಿಂಧು ಸಸ್ಖಲತ್ತರಂಗ ಭಂಗರಂಜಿತಂ ।

ದ್ವಿಷತ್ಸು ಪಾಪಜಾತ ಜಾತಕಾದಿವಾರಿ ಸಂಯುತಂ ॥

ಓಂ ನೇತ್ರಜಾಯೈ ನಮಃ । ಓಂ ಮಾನವನಂದಿನ್ಯೈ ನಮಃ । ಓಂ ಬ್ರಹ್ಮಾನಂದದ್ರವಾಯೈ ನಮಃ ।

ಅಗ್ನಿ, ಜಲ ಮತ್ತು ವಾಯುವಿನ ಸಾಮರಸ್ಯವನ್ನು ಪ್ರದರ್ಶಿಸುವ

ಅಯೋಧ್ಯಾ ಸರಯೂ ಆರತಿ.

ಶ್ರೀ ಜೈ ಸರಯೂ ಮಾತಾ ದೇವಿ ಜೈ ಸರಯೂ ಮಾತಾ ।

ರಾಮ ಜನ್ಮ ಭೂಮೀಕಾ ಕಣ್ ಕಣ್ ತುಝೆ ಧ್ಯಾತಾ ॥ ಶ್ರೀ ಜೈ ಸರಯೂ ಮಾತಾ ॥

ವಿಷ್ಣುಜೀ ಜಬ್ ಹರ್ಷಾಯೆ ಬ್ರಹ್ಮಾಜಿ ಕೆ ತಪಸೆ ।

ಉನಕೆ ನೇತ್ರೋಂಸೆ ಹೈ ಪ್ರಗಟೀ ಪ್ರೇಮ ಅಶ್ರು ಬನಕೆ ॥ ಶ್ರೀ ಜೈ ಸರಯೂ ಮಾತಾ ॥

ನೈನೋಂ ಸೆ ಜಲ ಬಿಂದು ವಿಷ್ಣುಜೀ ಕೆ ಗಿರೆ ।

ಮಾನಸರೋವರ ಮೆ ತಬ್ ಬ್ರಹ್ಮಾಜೀ ಉನ್ ಕೊ ಧರೆ ॥ ಶ್ರೀ ಜೈ ಸರಯೂ ಮಾತಾ ॥

ಋಷಿ ವಸಿಷ್ಠ ಕೆ ತಪ ಕೀ ಋಷಿಯೊ ನೆ ಕಥಾ ಕಹೀ ।

ತಜ್ ಕೆ ಸರೋವರ ಸರಯೂ ಅಯೋಧ್ಯಾಮೆ ಆಕೆ ಬಹೀ ॥ ಶ್ರೀ ಜೈ ಸರಯೂಮಾತಾ ॥

ರಾಮ್ ಚಲೆ ನಿಜ್ ಧಾಮ್ ತೊ ಸರಯೂ ಮೆ ಸಮಾಯೆ ।

ರಾಮರಾಜ್ಯ ಕೀ ಸಾಕ್ಷೀ ಭಕ್ತೋಂಕೊ ಭಾಯೆ ॥ ಶ್ರೀ ಜೈ ಸರಯೂ ಮಾತಾ ॥

ಪಾಪನಾಶಿನೀ ಮೋಕ್ಷದಾಯಿನೀ ಕಹೀ ನ ಜಾಯೆ ಗಾಥಾ ।

ಹರ್ ಜಲ್ ಕಣ್ ತೇರಾ ಪಾವನ್ ಹೈ ಮುಕ್ತೀದಾತಾ ॥ ಶ್ರೀ ಜೈ ಸರಯೂ ಮಾತಾ ॥

ಆರತಿ ಕರ್ ಕೆ ತುಮ್ಹಾರೀ ಪ್ರಣ ಯಹಿ ದೊಹರಾಯೆ ।

ಸುಂದರ ಮಂದಿರ್ ರಾಮ್ ಕಾ ಅಯೋಧ್ಯಾ ಮಂದಿರ್ ರಾಮ್ ಕಾ ।

ದರಶನ ದೊಹರಾಯೆ ॥ ಶ್ರೀ ಜೈ ಸರಯೂ ಮಾತಾ ॥

**ಹನುಮಾನ್ :**

ಅಪಾರ ಸಾಗರವನ್ನು ಹಾರಿ, ಶತ್ರುಗಳ ಕೈಗೆ ಸಿಗದೆ, ಸೀತಾಮಾತೆಯನ್ನು ಪತ್ತೆ ಹಚ್ಚಿ, ದೇವಿಯನ್ನು ಆತ್ಮಹತ್ಯೆಯ ಘೋರಾಪತ್ತಿನಿಂದ ಉಳಿಸಿ, ಸಮಾಶ್ವಾಸನೆ ನೀಡಿ, ರಾಮಾಂಗುಳೀಯಕವನ್ನು ಮಾತೆಗಿತ್ತು, ಮಾತೆಯ ಕುರುಹಾದ ಚೂಡಾಮಣಿಯನ್ನು ತರುತ್ತಾ, ರಾವಣನನ್ನು ಭೇಟಿಯಾಗಿ, ಅವನಿಗೂ ನೀತಿ ಹೇಳಿ, ಕೇಳದಾಗ, ಅವನ ಸೈನ್ಯವನ್ನು ಧ್ವಂಸ ಮಾಡಿ, ಲಂಕೆಯನ್ನು ಸುಟ್ಟು, ರಾಮಸೈನ್ಯ ಹೇಗಿರಬಹುದೆಂಬ ಭಯದ ರುಚಿಯನ್ನು ಲಂಕೆಯ ರಾಕ್ಷಸರಿಗೆ, ರಾವಣನಿಗೆ ಮುಟ್ಟಿಸಿ, ಸಮರ್ಥವಾಗಿ ಕಾರ್ಯಸಿದ್ಧಿ ಮಾಡಿಕೊಂಡು ಬಂದು, "ಏಷ ಸರ್ವಸ್ಯ ಭೂತಸ್ತು ಪರಿಷ್ವಂಗೋ ಹನೂಮತಃ" ಶ್ರೀರಾಮಾಲಿಂಗನ ಸೌಖ್ಯವನ್ನು ಅನುಭವಿಸಿದ ಧನ್ಯ.




ಕೇಸರಿ ಎಂಬ ವಾನರ ವೀರನಿಗೆ ವಾಯುದೇವರ ಅಂಶದಿಂದ ಅಂಜನಾದೇವಿಯಲ್ಲಿ ಜನಿಸಿದ ಹನುಮಾನ್ ಮಂದಿರ, ಅಯೋಧ್ಯೆಯ **ಹನುಮಾನ್ ಗಢೀ**/ಗರ್ಹೀ ಮಂದಿರ. ಅಯೋಧ್ಯಾ ನಗರ ಅದೆಷ್ಟು ಸಲ ಧಾಳಿಗೆ ಒಳಗಾದರೂ, ರಾಮಜನ್ಮಭೂಮಿ ಮಂದಿರ ಸೇರಿದಂತೆ ಅದೆಷ್ಟೋ ಮಂದಿರಗಳು ಶಿಥಿಲಗೊಂಡರೂ, ಅನಾದಿ ಕಾಲದಿಂದಲೂ ನಿರಂತರವಾಗಿ ಅಸ್ತಿತ್ವದಲ್ಲಿರುವ ಮಂದಿರವೆಂದರೆ ಹನುಮಾನ್ ಗಢೀ. ಲಂಕೆಯಿಂದ ವಿಜಯದ ಸಂಕೇತವಾಗಿ ತಂದ ನಿಶಾನೆಯಿರುವ ಮಂದಿರ. ಸಣ್ಣ ಗುಡ್ಡದ ಮೇಲೆ ಇರುವ ಹನುಮಾನ್ ಗಢೀ ಆಧ್ಯಾತ್ಮಿಕ ಸಾಧನೆ, ಅಚಲವಾದ ನಂಬಿಕೆಗೆ ಸಾಕ್ಷಿ. ಅಯೋಧ್ಯೆಯ ರಾಮಮಂದಿರಕ್ಕೆ ಭೇಟಿ ನೀಡುವ ಮೊದಲು ಹನುಮಾನ್ ಗಢೀಗೆ ಹೋಗಿ, ಪ್ರಾರ್ಥನೆ ಸಲ್ಲಿಸುವುದು ಅಯೋಧ್ಯೆಯ ವಾಡಿಕೆ. ಶ್ರೀರಾಮಚಂದ್ರನ ಧ್ಯಾನ, ಕೀರ್ತನ, ಕಥಾ ಶ್ರವಣಾದಿಗಳನ್ನು ಮಾಡುತ್ತಾ ಭಗವಾನ್ ಹನೂಮಂತನು ಇಲ್ಲಿ ಒಂದು ಗುಹೆಯಲ್ಲಿ ವಾಸಿಸುತ್ತಾ, ರಾಮ ಜನ್ಮಭೂಮಿಗೆ

ಕಾವಲು ಕಾಯುತ್ತಿದ್ದಾನೆಂಬ ಪ್ರಬಲ ನಂಬಿಕೆ. ಹನುಮಾನ್ ಗಢೀಯ ಹನುಮಂತನಿಗೆ ಅಯೋಧ್ಯೆಯ ಕೊತ್ವಾಲ ಎಂಬ ಬಿರುದು. ಜ್ಞಾನೋದಯದ ಪ್ರಯಾಣದಲ್ಲಿ ಆಧ್ಯಾತ್ಮಿಕ ಉನ್ನತಿಗೆ ರೂಪಕವಾಗಿರುವ ಮಂದಿರದ ಮೆಟ್ಟಿಲುಗಳು. ಭಕ್ತರ ಕಿಕ್ಕಿರಿದ ಅಪಾರ ಜನ ಸಂದಣಿ. ತಮ್ಮ ಜೀವನದ ಕತ್ತಲೆಯನ್ನು ತೊರೆದು ಹಾಕಲು ಭಕ್ತಿಯಿಂದ ಬೆಳಗಿರುವ ದೀಪಗಳ ಕಾಂತಿ. ಕೋಟೆಯಂತಹ ವಾಸ್ತುಶಿಲ್ಪ. ಕೋಟೆಯ ಸುತ್ತಲೂ ಎಲ್ಲೆಲ್ಲೂ ಡೊಂಕುಮೋರೆ ಬಾಲವ ತಿದ್ದಿ ಹೂಂಕರಿಸುತ್ತಿರುವ, ಹಲ್ಲುಮುಡಿಯ ಕಚ್ಚಿ ಬೆದರಿಸುತ್ತಿರುವ, ಹಸ್ತವನ್ನು ಎತ್ತಿರುವ, ಭಾರಕಾಲನ್ನು ಇಟ್ಟಿರುವ ಹನುಮಾನ್ ರೂಪಿ ಮಂಗಗಳು. ಶ್ರೀ ರಾಮಚಂದ್ರನಲ್ಲಿ ಮನವ ನಿಲ್ಲಿಸೋ ತನಕ, ಜ್ಞಾನ ಭಕುತಿಯನು ಕೊಡುವ ತನಕ, ದಿವ್ಯ ದರ್ಶನ ಭಾಗ್ಯ ನೀಡುವ ತನಕ, ಬಿಡುವೇನೇನಯ್ಯಾ ಹನುಮಾ, ಬಿಡುವೇನೇನಯ್ಯಾ, ಸುಮ್ಮನೆ ಬಿಡುವೆನೇನಯ್ಯಾ ಎಂಬ ಬೇಡಿಕೆ, ಅಂಜನಾದೇವಿಯೊಂದಿಗಿರುವ ಹನುಮಾನ್ ಜೀ ವಿಶಿಷ್ಟ ಭಂಗಿಯ ದಿವ್ಯ ಸಾನ್ನಿಧ್ಯದಲ್ಲಿ.



ಮಹಾ ಸಾಹಸಿಯೂ, ಅಪ್ರತಿಮ ವೀರನೂ, ನ್ಯಾಯ ಪಕ್ಷಪಾತಿಯೂ, ನಿಃಸ್ವಾರ್ಥಿಯೂ, ಮಿತ್ರೋಪಕಾರಿಯೂ, ಕಾಮಾದಿ ಸಕಲ ಪಾಶ, ಮೋಹ, ಬಂಧ ದೋಷದೂರನೂ, ವಿನಯ ಉಳ್ಳವನೂ, ಹಿತ ಹೇಳುವಲ್ಲಿ ನಿರ್ಭೀತನೂ, ದಾಕ್ಷಿಣ್ಯ ರಹಿತನೂ, ಸತ್ಯ ಪಕ್ಷಪಾತಿಯೂ, ಅದಮ್ಯ ಚೈತನ್ಯದ ಚಿಲುಮೆಯೂ, ಕರ್ತವ್ಯ ದಕ್ಷನೂ, ಸಮಯೋಚಿತ ಪ್ರಜ್ಞೆಯುಳ್ಳವನೂ, ತನ್ನನ್ನು ಆಶ್ರಯಿಸಿದವರಲ್ಲಿ ಅನುಕಂಪ ಉಳ್ಳವನೂ, ಪ್ರಾಣವನ್ನು ಕೊಟ್ಟಾದರೂ ಅವರನ್ನು ಕಾಪಾಡುವುದರಲ್ಲಿ ಬದ್ಧ ಶ್ರದ್ಧನೂ, ಸಕಲ ಶಾಸ್ತ್ರ ಪಾರಂಗತನೂ, ಹೃದಯವಂತನೂ, ತಾರ್ಕಿಕ ಬುದ್ಧಿ ಬಲವನ್ನುಳ್ಳವನೂ, ಧೀಮಂತನೂ, ವಿರಾಗಿಯೂ, ಭಕ್ತಾಗ್ರೇಸರನೂ ಅತ್ಯಪೂರ್ವನೂ ಆದ ಹನುಮಾನ್ ಆರತಿ.

ಆರತಿ ಕೀ ಜೈ ಹನುಮಾನ್ ಲಲಾ ಕೀ । ದುಷ್ಟದಲನ ರಘುನಾಥ ಕಲಾ ಕೀ ।
ಆರತಿ ಕೀ ಜೈ ಹನುಮಾನ್ ಲಲಾ ಕೀ ॥
ಜಾಕೆ ಬಲ್ ಸೆ ಗಿರಿವರ್ ಕಾಂಪೆ । ರೋಗ ದೋಷ ಜಾಕೆ ನಿಕಟನ ಝಾಂಕೆ ।
ಅಂಜನಿ ಪುತ್ರ ಮಹಾ ಬಲದಾಯೀ । ಸಂತನಕೆ ಪ್ರಭು ಸದಾ ಸಹಾಯೀ ॥ ಆರತಿ ॥
ದೆ ಬೀರಾ ರಘುನಾಥ ಪಠಾಯೆ । ಲಂಕಾ ಜಾರಿ ಸಿಯಾ ಸುಧಿ ಲಾಯೆ ।
ಲಂಕಾ ಸೊ ಕೋಟ್ ಸಮುದ್ರ ಸೀ ಖಾಯೀ । ಜಾತ್ ಪವನಸುತ ಬಾರ್ ನ ಲಾಯೀ ।
ಲಂಕಾ ಜಾರಿ ಅಸುರ ಸಂಹಾರೆ । ಸಿಯಾ ರಾಮ್ ಜೀ ಕೆ ತಾಜ್ ಸವಾರೆ ॥ ಆರತಿ ॥
ಲಕ್ಷ್ಮಣ ಮೂರ್ಛಿತ್ ಪಡೆ ಸಕಾರೆ । ಆನಿ ಸಂಜೀವನ ಪ್ರಾಣ ಉಬಾರೆ ।
ಪೈಟಿ ಪಾತಾಲ್ ತೋರಿ ಜಮ್ ಕಾರೆ । ಅಹಿರಾವಣ್ ಕೀ ಭುಜಾ ಉಖಾರೆ ।
ಬಾಯೆ ಭುಜಾ ಅಸುರದಲ್ ಮಾರೆ । ದಾಹಿನೆ ಭುಜಾ ಸಂತ್ ಜನ್ ತಾರೆ ॥ ಆರತಿ ॥
ಸುರ ನರ ಮುನಿ ಆರತೀ ಉತಾರೆ । ಜೈ ಜೈ ಜೈ ಹನುಮಾನ್ ಉಚಾರೆ ।
ಕಂಚನ್ ಥಾರ್ ಕಪೂರ್ ಲೌ ಛಾಯೀ । ಆರತೀ ಕರತ ಅಂಜನಾ ಮಾಯೀ ।
ಜೊ ಹನುಮಾನ್ ಜೀ ಕೀ ಆರತೀ ಗಾವೆ । ಬಸಿ ವೈಕುಂಠ ಪರಮಪದ ಪಾವೆ ॥ ಆರತಿ ॥

**ರಾಮ್ ಲಲ್ಲಾ:**

ಅಗಣಿತವಾನರಾಧಿಪನತಾಂಘ್ರಿಯುಗನಾದ ಶ್ರೀರಾಮನ ಜನ್ಮಭೂಮಿ ಮಂದಿರಕ್ಕೆ ಹೋಗುವ ದಾರಿಯಲ್ಲೂ ಅನೇಕಾನೇಕ ವಾನರ ಸಮೂಹ. ಅಯೋಧ್ಯೆಯ ರಾಮಜನ್ಮಭೂಮಿ ಮಂದಿರ ಕೇವಲ ದೇವ ಮಂದಿರವಲ್ಲ. ಭಾರತದ ಉಜ್ವಲತೆಯ ಪ್ರತೀಕ. ಭಾರತದಲ್ಲಿ ಸನಾತನವೆಂಬುದು ನಿತ್ಯನೂತನವೆಂಬುದರ ಸಂದೇಶ. ಜಗತ್ತಿನಲ್ಲೇ ಅತ್ಯಂತ ಭವ್ಯ ಸುಂದರ ದೇವಾಲಯ. ಕರಸೇವೆಯ ಮಹಾನ್ ಅಭಿಯಾನದಲ್ಲಿ ಭಾರತದ ಮೂಲೆ ಮೂಲೆಯಿಂದ ಭಕ್ತರು ತಲೆಯ ಮೇಲೆ ಹೊತ್ತು ತಂದ, “ಜೈ ಶ್ರೀರಾಮ್” ಎಂದು ಬರೆದ ಇಟ್ಟಿಗೆಗಳನ್ನು ಅಡಿಪಾಯದಲ್ಲಿ ಬಳಸಿ ನಿರ್ಮಿಸಲಾದ ಭವನ. ಪ್ರತಿಯೊಂದು ಇಟ್ಟಿಗೆಯಲ್ಲೂ ಭಕ್ತ ಜನರ

ಶ್ರದ್ಧಾ ಭಕ್ತಿಗಳ ಸಮರ್ಪಣೆ. ನಮ್ಮ ಜೀವಮಾನದಲ್ಲೇ ನಡೆದಿರುವ ರೋಚಕ ರೋಮಾಂಚಕ ಐತಿಹಾಸಿಕ ವಿದ್ಯಮಾನ, ಅಯೋಧ್ಯೆಯ ರಾಮ ಮಂದಿರದ ಉದ್ಘಾಟನೆ. ಮುಂದಿನ ಹತ್ತಾರು ಪೀಳಿಗೆಗಳು ನೆನಪಿಸಿಕೊಳ್ಳುವ ಸಾಧನೆ.



ದೂರದರ್ಶನದಲ್ಲಿ ಸತತವಾಗಿ ಒಂದು ವರ್ಷ ದರ್ಶನ ನೀಡಿ, ಪ್ರತ್ಯಕ್ಷ ದರ್ಶನ ಭಾಗ್ಯ ದಯಪಾಲಿಸಿದ ಪರಮಾತ್ಮನ ಕೃಪೆ.

ಉತ್ತಮ ಪುತ್ರನಾಗಿ, ಆದರ್ಶ ಪತಿಯಾಗಿ, ನೆಚ್ಚಿನ ಸ್ನೇಹಿತನಾಗಿ, ಮೆಚ್ಚಿನ ಸೋದರನಾಗಿ, ಪ್ರೀತಿಯ ಪ್ರಭುವಾಗಿ, ಧರ್ಮದ ಆರಾಧಕನಾಗಿ, ಆ ಧರ್ಮದ ಸಾಕಾರ ಮೂರ್ತಿಯೇ ಆಗಿ, ಋಷಿಮುನಿಗಳ ಹಿತಕರನಾಗಿ, ಸೌಜನ್ಯಕ್ಕಿನ್ನೊಂದು ಹೆಸರಾಗಿ, ದಕ್ಷ ಆಡಳಿತಗಾರನಾಗಿ, ಪತಿತರಿಗೆ ಪಾವನನಾಗಿ, ಯೋಗಿಗಳ ಧ್ಯೇಯನಾಗಿ, ಕೋಟಿ ಕೋಟಿ ಜನರ ಆರಾಧ್ಯ ದೈವವಾಗಿ, ಅವರೆಲ್ಲರ ಮನದ ದೇಗುಲದಲ್ಲಿ ಹೃದಯ ಸಿಂಹಾಸನದಲ್ಲಿ ಇಂದಿಗೂ ಎಂದಿಗೂ ಎಂದೆಂದಿಗೂ ರಾರಾಜಿಸುವ ಮಹಾಪುರುಷನಾದ ಶ್ರೀರಾಮಚಂದ್ರಮೂರ್ತಿ, ಇಲ್ಲಿ ಅಪರೂಪದ ಬಾಲಕ ರಾಮ್ ಲಲ್ಲಾ ನಾಗಿ ಪ್ರತ್ಯಕ್ಷ.

ಸರ್ವವ್ಯಾಪಕನೂ, ನಿರಂಜನನೂ, ನಿರ್ಗುಣನೂ, ಆನಂದ ಸ್ವರೂಪನೂ, ಮಾಯಾತೀತನೂ, ಜ್ಞಾನ, ವಾಣಿ ಮತ್ತು ಇಂದ್ರಿಯಗಳಿಗೆ ಅತೀತನೂ ಆದ ಪರಬ್ರಹ್ಮನು, ದಶರಥ ಮತ್ತು ಕೌಸಲ್ಯೆಯರ ವಾತ್ಸಲ್ಯ, ಪ್ರೇಮಕ್ಕೆ ವಶನಾಗಿ, ಬಾಲ ಲೀಲೆಗಳನ್ನು ಪ್ರದರ್ಶಿಸಿದ ರಾಮ ಜನ್ಮಭೂಮಿಯಲ್ಲಿ ಮಂದಿರದ ಉದ್ಘಾಟನೆಯಂದು ದೇಶದ ಉದ್ದಗಲದಲ್ಲಿ ಹಬ್ಬದ ಉತ್ಸಾಹ. ಮನೆ ಮನೆಯಲ್ಲಿ ರಾಮ ಭಕ್ತಿಯ ಮಹಾಪೂರ. ಶತಮಾನಗಳ ಕನಸು ಈಡೇರಿದ ಧನ್ಯಾನುಭವ.

ಮೇರಿ ಚೌಕಟ್ ಪೆ ಚಲ್ ಕೆ ಆಜ್ ಚಾರೋಂ ಧಾಮ್ ಆಯೇ ಹೈ ।

ಬಜಾಓ ಡೋಲ್ ಸ್ವಾಗತ್ ಮೆ ಮೆರೆ ಘರ್ ರಾಮ್ ಆಯೇ ಹೈ ।
ಕಥಾ ಶಬರೀ ಕಿ ಜೈಸೆ ಜುಡ್ ಗಯಿ ಮೇರಿ ಕಹನೀ ಸೆ ।
ನ ರೋಕೋ ಆಜ್ ಧೋನೆ ದೊ ಚರಣ್ ಆಂಖೋಂಕೆ ಪಾನೀ ಸೆ ।
ಬಹುತ್ ಖುಷ್ ಹೈ ಮೆರೆ ಆಂಸು ಕಿ ಪ್ರಭು ಕೆ ಕಾಮ್ ಆಯೆ ಹೈ ।
ಬಜಾಓ ಡೋಲ್ ಸ್ವಾಗತ್ ಮೆ ಮೆರೆ ಘರ್ ರಾಮ್ ಆಯೇ ಹೈ ।
ತುಮ್ಕೊ ಪಾಕೆ ಕ್ಯಾ ಪಾಯಾ ಹೈ ಸೃಷ್ಟಿ ಕೆ ಕಣ್ ಕಣ್ ಸೆ ಪೂಛೊ ।
ತುಮ್ ಕೊ ಖೋನೆ ಕಾ ದುಖ್ ಕ್ಯಾ ಹೈ ಕೌಶಲ್ಯಾ ಕೆ ಮನ್ ಸೆ ಪೂಛೊ ।
ದ್ವಾರ್ ಮೆರೆ ಯೆ ಅಭಾಗೆ ಆಜ್ ಇನ್ಕೆ ಭಾಗ್ ಜಾಗೆ ।
ಬಡಿ ಲಂಬಿ ಇಂತಝಾರಿ ಹುಯೀ ರಘುವರ್ ತುಮ್ಹಾರಿ ತಬ್ ಆಯೀ ಸವಾರೀ ।
ಸಂದೆಸೆ ಆಜ್ ಖುಷಿಯೋಂಕೆ ಹಮಾರೆ ನಾಮ್ ಆಯೇ ಹೈ ।
ಬಜಾಓ ಡೋಲ್ ಸ್ವಾಗತ್ ಮೆ ಮೆರೆ ಘರ್ ರಾಮ್ ಆಯೇ ಹೈ ।
ದರ್ಶನ್ ಪಾಕೆ ಹೇ ಅವತಾರೀ ಧನ್ಯ ಹುವೆ ಹೈ ನೈನ್ ಪುಜಾರಿ ।
ಜೀವನ್ ನೈಯ್ಯಾ ತುಮ್ ನೆ ತಾರೀ ಮಂಗಳ ಭವನ್ ಅಮಂಗಳ್ ಹಾರೀ ।
ನಿರ್ಧನ್ ಕಾ ತುಮ್ ಧನ್ ಹೊ ರಾಘವ್ ತುಮ್ ಹೀ ರಾಮಾಯಣ್ ಹೋ ರಾಘವ್ ।
ಸಬ್ ದುಖ್ ಹರ್ ನಾ ಅವಧ್ ಬಿಹಾರೀ ಮಂಗಳ ಭವನ್ ಅಮಂಗಳ್ ಹಾರೀ ।
ಚರಣೋಂ ಕಿ ಧೂಲ್ ಲೇಲೂಂ ಮೈ ಮೆರೆ ಭಗವಾನ್ ಆಯೇ ಹೈ ।
ಬಜಾಓ ಡೋಲ್ ಸ್ವಾಗತ್ ಮೆ ಮೆರೆ ಘರ್ ರಾಮ್ ಆಯೇ ಹೈ ।
ಮೇರಿ ಚೌಕಟ್ ಪೆ ಚಲ್ ಕೆ ಆಜ್ ಚಾರೋಂ ಧಾಮ್ ಆಯೇ ಹೈ ।
ಬಜಾಓ ಡೋಲ್ ಸ್ವಾಗತ್ ಮೆ ಮೆರೆ ಘರ್ ರಾಮ್ ಆಯೇ ಹೈ ।

ಕಾಗಭುಶುಂಡಿಯು ಶ್ರೀರಾಮನ ಜನ್ಮೋತ್ಸವದಲ್ಲಿ ಪಟ್ಟ ಸಂಭ್ರಮಕ್ಕೆ ಸಾಕ್ಷಿ;

ಸರ್ವವ್ಯಾಪ್ತನೂ, ಸರ್ವತಂತ್ರ ಸ್ವತಂತ್ರನೂ ಆದ ಪರಮಾತ್ಮ ಶಿಶುವಾಗಿ ಮಲಗಿದ ತೊಟ್ಟಿಲಿಗೆ ಸಾಕ್ಷಿ;

ವೇದಗಳಿಗೆ ಅಗೋಚರನಾದ ಭಗವಂತನು ಕೌಸಲ್ಯೆ, ಸುಮಿತ್ರೆ, ಕೈಕೇಯಿಯರ ಜೋಗುಳಕ್ಕೆ ಮಾಡಿದ ಸುಖನಿದ್ರೆಗೆ ಸಾಕ್ಷಿ;

ಹದಿನಾಲ್ಕು ಲೋಕಗಳನ್ನು ತನ್ನ ಉದರದಲ್ಲಿ ಅಡಗಿಸಿಕೊಂಡ ದೇವಾಧಿದೇವನು ಕೌಸಲ್ಯೆ ದಶರಥರೊಂದಿಗೆ ನಲಿದು ಆಡಿದ ಆಟಪಾಟಗಳಿಗೆ ಸಾಕ್ಷಿ;

ಇಂದ್ರಾದಿ ಮೂವತ್ತುಮೂರು ಕೋಟಿ ದೇವತೆಗಳು, ಅಷ್ಟದಿಕ್ಪಾಲಕರು, ಹರಿಯಾಜ್ಞೆಯನ್ನು ಸದಾ ಕಾಯುತ್ತಿದ್ದರೇ, ಹರಿಯೇ ದಶರಥನ ಅರಮನೆಯಲ್ಲಿ ಕೈಕೂಸಾದುದಕ್ಕೆ ಸಾಕ್ಷಿ;

ತ್ರಿವಿಕ್ರಮನಾಗಿ ಲೋಕತ್ರಯಗಳನ್ನು ತನ್ನ ತ್ರಿಪಾದಗಳಿಂದ ಅಳೆದ ವಾಮನನು, ಅಂಬೆಗಾಲಿಕ್ಕುವ ಮಗುವಾಗಿ ತಾರಾಡಿದುದಕ್ಕೆ ಸಾಕ್ಷಿ;

ಜಗದ ಜೀವಿಗಳನ್ನು ಅಹರ್ನಿಶಿ ಆಡಿಸತಕ್ಕ ಸೂತ್ರಧಾರಿ, ಬಾಲಕೇಳಿಯಾಡಿದ್ದಕ್ಕೆ ಸಾಕ್ಷಿ;

**ಶ್ರೀರಾಮ ಜನ್ಮಭೂಮಿ**.

ರಾಮ ಜನ್ಮಭೂಮಿ ಮಂದಿರ. ಎತ್ತರವಾದ ರಚನೆ, ಸಂಕೀರ್ಣವಾದ ಕೆತ್ತನೆಗಳು.

ಕಲ್ಯಾಣಾನಾಂ ನಿಧಾನಂ ಕಲಿಮಲ ಮಥನಂ ಪಾವನಂ ಪಾವನಾನಾಂ

ಪಾಥೇಯಂ ಯನ್ಮುಮುಕ್ಷೋಃ ಸಪದಿ ಪರಪದಪ್ರಾಪ್ತಯೇ ಪ್ರಸ್ಥಿತಸ್ಯ ।

ವಿಶ್ರಾಮ ಸ್ಥಾನಮೇಕಂ ಕವಿವರವಚಸಾಂ ಜೀವನಂ ಸಜ್ಜನಾನಾಂ

ಬೀಜಂ ಧರ್ಮದ್ರುಮಸ್ಯ ಪ್ರಭವತು ಭವತಾಂ ಭೂತಯೇ ರಾಮನಾಮಂ ॥



ಕರುಣಾಮಯವಾದ ರಾಮ ಲಲ್ಲಾನ ನೋಟದ ಸೊಗಸು, ಮಂದಸ್ಮಿತ ಚಂದ್ರನಿಗಿಂತಲೂ ಸುಂದರವಾದ ಮುಖಾರವಿಂದ, ಅಭಯಪ್ರದವಾದ ಕೈಗಳು, ಶ್ಯಾಮಲ ಸುಂದರ ಶರೀರದ ಅನಂಗ ಕಾಂತಿ, ನವರಾಜೀವಾರುಣ ಮೃದು ಚರಣಗಳು, ಮೃದು ಮನೋಹರ ಕಾಲ್ಬೆರಳುಗಳು, ಚಂದ್ರಕಾಂತಿಯನ್ನು ಧಿಕ್ಕರಿಸುವಂತಿರುವ ಚರಣಯುಗ ನಖಾವಳಿ, ವಕ್ಷಸ್ಥಳದಲ್ಲಿ ಅಲುಗಾಡುತ್ತಿರುವ ದಿವ್ಯ ಮಣಿಹಾರಗಳು,

ಪಾದಗಳಲ್ಲಿರುವ ದಂಡಪೆಂಡೇರವೂ, ಕೈಯ್ಯಲ್ಲಿರುವ ಕಂಕಣಗಳೂ, ಬೆರಳುಗಳಲ್ಲಿ ಮಿನುಗುತ್ತಿರುವ ನವರತ್ನಮಯ ಉಂಗುರಗಳೂ, ಹೊಳೆಯುವ ಕರ್ಣಕುಂಡಲಗಳೂ, ಅಂದವಾದ ಮುಂಗುರುಳು, ಲಲಿತ ಕಪೋಲ, ಸಂಪಿಗೆಯ ಮೊಗ್ಗಿನಂತಿರುವ ನೀಳಾದ ಸುಂದರ ನಾಸಿಕ, ಸುಂದರವಾದ ತಿಲಕದಿಂದ ಶೋಭಿಸುತ್ತಿರುವ ಲಲಾಟ, ಕೆಂಪು ಪೀತಾಂಬರ.



ಎಂಥ ಮುದ್ದೋ ! ಎಂತ ಸೊಗಸೋ ! ಎವರಿವಲ್ಲ ವರ್ಣಿಂಪತಗುನೇ !

ಬಿಲಜಮೌನಿಕೃತ ಚರಿತ್ರನೂ, ಸುರಸಾರಿಪುಕರಾಬ್ಜ ಲಾಲಿತ ಚರಣನೂ, ಕರದೃತಶರಜಾಲನೂ, ಸುಂದರತರ ವದನನೂ, ಚಂದ್ರ ಸೂರ್ಯ ನಯನನೂ, ಲಸನ್ಮಕುಟಕುಂಡಲ ವಿರಾಜಿತನೂ, ಕನಕಚೇಲನೂ, ಅದ್ಭುತಸುಕವಿಜನ ಹೃತ್ಸದನನೂ, ಪಾಪಗಜನೃಸಿಂಹವರನೂ, ತೇಜಪುಂಜನೂ, ದಿವ್ಯಮಂಗಳ ಸ್ವರೂಪನೂ ಆದ ರಾಮ ಲಲ್ಲಾನ ಆರತಿ.

ಆರತಿ ಕೀಜೆ ಶ್ರೀ ರಾಮಲಲಾ ಕೀ ರಘುನಂದನ್ ಸಂಪೂರ್ಣ ಕಲಾ ಕೀ ॥ ಆರತಿ ॥
ನಾರಾಯಣ ನರ ಬನ ಕರ ಆಯೇ ರಘುಕುಲ ನಂದನ ರಾಮ ಕಹಾಯೇ ।
ಕೌಶಲ್ಯಾ ಸುತ ರಾಜೀವಲೋಚನ ದಶರಥ ಸುತ ಹರಿ ಭವಭಯಮೋಚನ ॥ ಆರತಿ ॥
ಭರತ ಲಖನ ಶತ್ರುಘನ ಸಮೇತ ಪ್ರಗಟೆ ಅವಧ ಮೆ ಕೃಪಾನಿಕೇತಾ ।
ಧನುಷ ಬಾಣ ದಿವ್ಯದಿವ್ಯಾಯುಧ ಧಾರೀ ಜನ ಮನ ರಂಜನ ಅವಧ ಬಿಹಾರೀ ॥ ಆರತಿ ॥
ಗುರು ವಸಿಷ್ಠ ಸೆ ವಿದ್ಯಾ ಪಾಯೆ ವಿಶ್ವಾಮಿತ್ರ ಕಾ ಯಜ್ಞ ಬಚಾಯೆ ।
ತಾರ್ ಅಹಲ್ಯಾ ಮಿಥಿಲಾ ಆಯೇ ಜನಕಸುತಾ ಸೆ ಬ್ಯಾಹ ರಚಾಯೇ ॥ ಆರತಿ ॥
ಪಿತಾ ವಚನ ಹಿತ ವನ್ ಕೊ ಗಾಯೇ ರಾವಣ ವಧ್ ಕರ್ ಅವಧ ಕೊ ಆಯೇ ।
ಸಿಯ ಸಂಗ ಸಿಂಗಾಸನಕೋ ಸಜಾಯೇ ರಾಮರಾಜ ತ್ರಿಭುವನ ಮೆ ಲಾಯೇ ॥ ಆರತಿ ॥
ಜಯ ಜಯ ಮರ್ಯಾದಾ ಅವತಾರೀ ಜಯ ಜಯ ಧನುಷ ಬಾಣ ಕೆ ಧಾರೀ ।
ಜಯ ಸೀತಾಪತಿ ಜಯ ಅಸುರಾರೀ ಜಯ ರಘುನಾಯಕ ಅವಧ ಬಿಹಾರೀ ॥ ಆರತಿ ॥
ರಾಮ ಸಿಯಾ ಕೀ ಆರತಿ ಪಾವನಿ ಸಕಲ ದೋಷ ದುಃಖ ತಾಪ ನಸಾವನಿ ।
ಶಿವ ಅಜ ಇಂದ್ರ ಸಂತ ಮನ ಭಾವನಿ ಪಂಚರೋಗತ್ರಯ ತಾಪ ಮಿಟಾವನಿ ॥ ಆರತಿ ॥
ರಾಮಚರಣಮೆ ಜೊ ಚಿತ್ ಲಾವೆ ಪ್ರೇಮ ಭಕ್ತಿ ಸೆ ಗುಣ ಯಶ ಗಾವೆ ।
ಅಕ್ಷಯ ಸುಖ ಯಶ ವೈಭವ ಪಾವೆ ಅಂತಕಾಲ ಭವ ಸೆ ತರ ಜಾವೆ ॥ ಆರತಿ ॥

ಅಯೋಧ್ಯೆಯ ತುಂಬಾ ರಾಮ ಮಂದಿರಗಳೇ;
ಪ್ರತಿಯೊಬ್ಬರ ಮನೆಯೂ ರಾಮ ಜನ್ಮಭೂಮಿ ಮಂದಿರವೇ;

"ರಾಮಸ್ಯಾರ್ಥೇ ಸರ್ವಂ ತ್ಯಜೇತ್" ಎಂಬ ಭಾವನೆ. ನಮ್ಮ ಮನೆ ನಮ್ಮದಲ್ಲ. ಅದು ಶ್ರೀರಾಮಚಂದ್ರನ ಮಂದಿರ. ನಾವು ಅಲ್ಲಿ ವಾಸವಾಗಿದ್ದೇವೆ ಎಂಬ ವಿನಯ ಅಲ್ಲಿಯ ವಾಸಿಗಳಲ್ಲಿ. ಸರ್ವ ಜನಾನುರಾಗಿ ಶ್ರೀರಾಮಚಂದ್ರ. ಬ್ರಹ್ಮ ಸೃಷ್ಟಿಸಬಹುದಾದ ಅತ್ಯಂತ ಆದರ್ಶ ಮಾನವರೂಪಿ ಶ್ರೀರಾಮ. ಧರ್ಮಪ್ರತಿಪಾದಕನಾಗಿ, ಸತ್ಯವಾಕ್ಯನಾಗಿ ನಡೆದ ಶ್ರೀರಾಮ ಧೀರ, ಶೂರ, ಗಂಭೀರ, ಜ್ಞಾನಿ,

ಪರಮಗುಣಸಂಪನ್ನ, ಇತರರ ಕಷ್ಟಕೋಟಲೆಗಳಿಗೆ ಮಿಡಿದ ಹೆಂಗರುಳುಳ್ಳ ಕರುಣಾಮಯಿ, ದೀನದಲಿತರ ಬಂಧು, ಕಾರುಣ್ಯಸಿಂಧು ಶ್ರೀರಾಮ. ಎಲ್ಲರ ಮನಗಳನ್ನು ಸೂರೆಗೊಳ್ಳುವವನೂ, ಶತ್ರುಗಳ ಎದೆಯಲ್ಲಿ ನಡುಕ ಹುಟ್ಟಿಸುವವನೂ, ತನ್ನ ಜೀವನವನ್ನೇ ಸಂದೇಶವಾಗಿಸಿಕೊಂಡವನೂ ಶ್ರೀರಾಮ. ಮಿತಭಾಷಿ, ಹಿತಭಾಷಿಯಾದವನೂ, ಮಾತು ಕೃತಿಗಳಲ್ಲಿ ಭೇದವಿಲ್ಲದವನೂ, ಸುಖ ದುಃಖಗಳನ್ನು ಸಮಚಿತ್ತದಿಂದ ಸ್ವೀಕರಿಸುವನೂ ಆದ ಶ್ರೀರಾಮನಿಂದಲೇ ಶ್ಲಾಘಿಸಲ್ಪಟ್ಟ ಭರತ, ಹದಿನಾಲ್ಕು ವರುಷಗಳು ತಾಪಸಿಯಂತೆ ಬಾಳಿದ ತಪೋ ಭೂಮಿ **ನಂದಿಗ್ರಾಮ.**



ಜಗತ್ತಿಗೆ ಸದಾ ಆದರ್ಶಪ್ರಾಯನಾಗಿ, ಧರ್ಮಾತ್ಮನಾಗಿ, ತ್ಯಾಗಮೂರ್ತಿಯಾಗಿ, ರಾಮಾಯಣ ಪಾತ್ರಗಳಲ್ಲಿ ರತ್ನಪ್ರಾಯನಾಗಿರುವ ಭರತನ ಕರ್ಮಭೂಮಿ, ನಂದಿಗ್ರಾಮ. ಹದಿನಾಲ್ಕು ವರ್ಷಗಳ ಕಾಲ ಪ್ರತಿದಿನವೂ ಭರತನು ಸ್ನಾನ ಮಾಡಿದನೆಂಬ ಪ್ರಖ್ಯಾತಿಗೊಂಡಿರುವ ಭರತಕುಂಡ.

ಜಟಾವಲ್ಕಲಧಾರಿಯಾಗಿ, ತಪೋನಿಷ್ಠನಾಗಿ, ರಾಮನ ಪರವಾಗಿ ರಾಜ್ಯವನ್ನು ಆಳಿದ ಭರತನ ನಿವಾಸ ಭರತ ಗುಹಾ.



ಶ್ರೀರಾಮನನ್ನು ಬಿಟ್ಟಗಲಲು ಒಪ್ಪಿ, ವಿರಹ ಸಹಿಸಿ, ಪ್ರಜಾಕ್ಷೇಮ ನೋಡಿದ ಪಾದುಕೆಗಳಿರುವ ಪಾದುಕಾದೇವಿ ಮಂದಿರ ಇರುವ ಪುಣ್ಯ ಧಾಮ ನಂದಿಗ್ರಾಮ. ವಿನಾಕಾರಣ ಹೊತ್ತುಕೊಳ್ಳಬೇಕಾಗಿ ಬಂದ ಭರತನ ಅಪವಾದವನ್ನು ಹೋಗಲಾಡಿಸಿದ ಭಾಗ್ಯಲಕ್ಷ್ಮಿ ಪಾದುಕಾದೇವಿಯ ಸ್ಪರ್ಶ ಶಿರದ ಮೇಲೆ. ಭರತನಂತೆಯೇ ಧನ್ಯರಾದಂತಹ ಅನಿರ್ವಚನೀಯ ಭಾವನೆ.

ಸವಾಲವ್ಯಂಜನಂ ಛತ್ರಂ ಧಾರಯಾಮಾಸ ಸ ಸ್ವಯಮ್ ।
ಭರತಃ ಶಾಸನಮ್ ಸರ್ವಂ ಪಾದುಕಾಭ್ಯಾಂ ನಿವೇದಯನ್ ॥
ಸ ಪಾದುಕೇ ಸಂಪ್ರಣಮ್ಯ ರಾಮಂ ವಚನಮಬ್ರವೀತ್ ।
ಚತುರ್ದಶ ಹಿ ವರ್ಷಾಣಿ ಜಟಾಚೀರಧರೋಹ್ಯಹಮ್ ।

ಫಲಮೂಲಾಶ್ಚನೋ ವೀರ ಭವೇಯಂ ರಘುನಂದನ ॥
ತವಾಗಮನಮಾಕಾಂಕ್ಷನ್ ವಸನ್ ವೈ ನಗರಾದ್ಬಹಿಃ ।
ತವಪಾದುಕಯೋರ್ನನ್ಯ ರಜ್ಯತಂತ್ರಂ ಪರಂತಪ ॥






ಭರತನ ಚರಿತ್ರೆಯನ್ನು ಆಲಿಸುವವರಿಗೆ ಶ್ರೀಸೀತಾರಾಮರ ಚರಣಗಳಲ್ಲಿ ಭಕ್ತಿಯುಂಟಾಗಿ, ಸಾಂಸಾರಿಕ ವಿಷಯರಸದಿಂದ ವಿರಕ್ತಿಯುಂಟಾಗುವುದೆಂದು ಮಹರ್ಷಿ ತುಲಸೀದಾಸರಿಂದ ಫಲಶ್ರುತಿ ಬರೆಯಲ್ಪಟ್ಟ ಶ್ರೀರಾಮಪಾದುಕಾ ಪೂಜೆ.

ಸಿಂಘಾಸನ ಪ್ರಭು ಪಾದುಕಾ ಬೈಠಾರೇ ನಿರುಪಾಧಿ
ರಾಮ ಪೇಮ ಭಾಜನ ಭರತು ಬಢ಼ಏ ನ ಏಹಿಂ ಕರತೂತಿ।
ಚಾತಕ ಹಂಸ ಸರಾಹಿಅತ ಟೇಂಕ ಬಿಬೇಕ ಬಿಭೂತಿ ॥
ನಿತ ಪೂಜತ ಪ್ರಭು ಪಾವರೀ ಪ್ರೀತಿ ನ ಹೃದಯ ಸಮಾತಿ ।
ಮಾಗಿ ಮಾಗಿ ಆಯಸು ಕರತ ರಾಜ ಕಾಜ ಬಹು ಭಾತಿ ॥

ಪುಲಕ ಗಾತ ಹಿಯ ಸಿಯ ರಘುಬೀರೂ । ಜೀಹ ನಾಮು ಜಪ ಲೋಚನ ನೀರೂ ॥
ಲಖಿನ ರಾಮ ಸಿಯ ಕಾನನ ಬಸಹೀ । ಭರತು ಭವನ ಬಸಿ ತಪ ತನು ಕಸಹೀ ॥
ದೌ ದಿಸಿ ಸಮುಝಿ ಕಹತ ಸಬು ಲೋಗೂ । ಸಬ ಬಿಧಿ ಭರತ ಸರಾಹನ ಜೋಗೂ ॥
ಸುನಿ ಬ್ರತ ನೇಮ ಸಾಧು ಸಕುಚಾಹೀ । ದೇಖಿ ದಸಾ ಮುನಿರಾಜ ಲಜಾಹೀ ॥
ಪರಮ ಪುನೀತ ಭರತ ಆಚರನೂ । ಮಧುರ ಮಂಜು ಮುದ ಮಂಗಲ ಕರನೂ ॥
ಹರನ ಕಠಿನ ಕಲಿ ಕಲುಷ ಕಲೇಸೂ । ಮಹಾಮೋಹ ನಿಸಿ ದಲನ ದಿನೇಸೂ ॥
ಪಾಪ ಪುಂಜ ಕುಂಜರ ಮೃಗರಾಜೂ । ಸಮನ ಸಕಲ ಸಂತಾಪ ಸಮಾಜೂ।
ಜನ ರಂಜನ ಭಂಜನ ಭವ ಭಾರೂ । ರಾಮ ಸನೇಹ ಸುಧಾಕರ ಸಾರೂ ॥

ಸಿಯ ರಾಮ ಪ್ರೇಮ ಪಿಯೂಷ ಪೂರನ ಹೋತ ಜನಮು ನ ಭರತ ಕೋ ।
ಮುನಿ ಮನ ಅಗಮ ಜಮ ನಿಯಮ ಸಮ ದಮ ಬಿಷಮ ಬ್ರತ ಆಚರತ ಕೋ ॥
ದುಖ ದಾಹ ದಾರಿದ ದಂಭ ದೂಷನ ಸುಜಸ ಮಿಸ ಅಪಹರತ ಕೋ ।
ಕಲಿಕಾಲ ತುಲಸೀ ಸೇ ಸಠನ್ಹಿ ಹಠಿ ರಾಮ ಸನಮುಖ ಕರತ ಕೋ ॥

ಭರತ ಚರಿತ ಕರಿ ನೇಮು ತುಲಸೀ ಜೋ ಸಾದರ ಸುನಾಹಿ ।
ಸೀಯ ರಾಮ ಪದ ಪೇಮು ಅವಸಿ ಹೋಇ ಭವ ರಸ ಬಿರತಿ ॥

ಸಂಜೀವನ ಪರ್ವತವನ್ನು ಎತ್ತಿಕೊಂಡು ಹೋಗುತ್ತಿರುವ ಮಾರುತಿಗೆ ಭರತನೊಂದಿಗೆ ಭೇಟಿಯಾದ ಪವಿತ್ರ ಸ್ಥಳ – ಭರತ್ ಹನುಮಾನ್ ಮಿಲಾಪ್ ಮಂದಿರ.






ರಾಮನ ಸಮಾಚಾರವನ್ನು ಹನುಮ ತಿಳಿಸಿದ ನಂತರ ಅವನನ್ನು ಆಲಂಗಿಸಿ, "ಅಶೋಕಜೈಃ ಪ್ರೀತಿಮಯ್ಯೈಃ", ದುಃಖದಿಂದಾಗದ ಆದರೆ ಪ್ರೀತಿಯ ಉತ್ಕರ್ಷದಿಂದ ಕಣ್ಣೀರಿನಿಂದ ಹನುಮನ ಮೈಯ್ಯನ್ನು ಒದ್ದೆಯಾಗಿಸಿದ ಭರತ ಹನುಮರ ಅಪರೂಪದ ಮಿಲನದ ತುಳಸೀದಾಸರ ದೋಹಾ.

ದೇಖಾ ಭರತ ಬಿಸಾಲ ಅತಿ ನಿಸಿಚರ ಮನ ಅನುಮಾನಿ।

ಬಿನು ಫರ ಸಾಯಕ ಮಾರೇಉ ಚಾಪ ಶ್ರವನ ಲಗಿ ತಾನಿ ॥

ಪರೇಉ ಮುರುಛಿ ಮಹಿ ಲಾಗತ ಸಾಯಕ । ಸುಮಿರತ ರಾಮ ರಾಮ ರಘುನಾಯಕ ॥

ಸುನಿ ಪ್ರಿಯ ಬಚನ ಭರತ ತಬ ಧಾಏ । ಕಪಿ ಸಮೀಪ ಅತಿ ಆತುರ ಆಏ ॥

ಬಿಕಲ ಬಿಲೋಕಿ ಕೀಸ ಉರ ಲಾವಾ । ಜಾಗತ ನಹಿಂ ಬಹು ಭಾँತಿ ಜಗಾವಾ ॥

ಮುಖ ಮಲೀನ ಮನ ಭೇ ದುಖಾರೀ । ಕಹತ ಬಚನ ಭರಿ ಲೋಚನ ಬಾರೀ ॥

ಜೇಹಿಂ ಬಿಧಿ ರಾಮ ಬಿಮುಖ ಮೋಹಿ ಕೀನ್ಹಾ ।

ತೇಹಿಂ ಪುನಿ ಯಹ ದಾರುನ ದುಖ ದೀನ್ಹಾ ॥

ಜೌಂ ಮೋರೇ ಮನ ಬಚ ಅರು ಕಾಯಾ । ಪ್ರೀತಿ ರಾಮ ಪದ ಕಮಲ ಅಮಾಯಾ ॥

ತೌ ಕಪಿ ಹೌ ಬಿಗತ ಶ್ರಮ ಸೂಲಾ । ಜೌ ಮೋ ಪರ ರಘುಪತಿ ಅನುಕೂಲಾ ॥

ಸುನತ ಬಚನ ಉಠಿ ಬೈಠ ಕಪೀಸಾ । ಕಹಿ ಜಯ ಜಯತಿ ಕೋಸಲಾಧೀಸಾ ॥

ಲೀನ್ಹ ಕಪಿಹಿ ಉರ ಲಾಇ ಪುಲಕಿತ ತನು ಲೋಚನ ಸಜಲ ।

ಪ್ರೀತಿ ನ ಹೃದಯ ಸಮಾಇ ಸುಮಿರಿ ರಾಮ ರಘುಕುಲ ತಿಲಕ ॥

ಆದರ್ಶ ಪುತ್ರನಾಗಿ, ಆದರ್ಶ ಶಿಷ್ಯನಾಗಿ, ಆದರ್ಶ ಪತಿಯಾಗಿ, ಆದರ್ಶ ಅಗ್ರಜನಾಗಿ, ಆದರ್ಶ ವೈರಿಯಾಗಿ, ಆದರ್ಶ ಸಂರಕ್ಷಕನಾಗಿ, ಆದರ್ಶ ಚಕ್ರವರ್ತಿಯಾಗಿ ಮಾನವರ ಜೀವನ ನಾಟಕದೊಳಗೊಂದು ನಾಟಕವನ್ನಾಡಿ ಆದರ್ಶ ಮಾನವನಾದ ಶ್ರೀರಾಮಚಂದ್ರ, ನೇಪಥ್ಯಕ್ಕೆ ಸರಿದು ಮೂಲರೂಪವನ್ನು ಪ್ರಕಟಿಸಿದ ದಿವ್ಯ ಸಾನ್ನಿಧ್ಯ **ಗುಪ್ತರ್ ಘಾಟ್.**











ಅಯೋಧ್ಯೆಯನ್ನು ಸುತ್ತುವರಿದಿರುವ ಸರಯೂ ನದಿಯ ಅನೇಕ ಘಾಟ್ ಗಳಲ್ಲಿ ಮಕುಟ ಪ್ರಾಯವಾಗಿರುವ ಘಾಟ್ - ಗುಪ್ತ ಹರಿ ಕಾ ದ್ವಾರ್ - ಗುಪ್ತರ್ ಘಾಟ್. ವಾಲ್ಮೀಕಿ ರಾಮಾಯಣದಲ್ಲಿ ಗೋಪ್ರತಾರ ಘಾಟ್ ಎಂದು ವರ್ಣಿಸಲ್ಪಟ್ಟ ಘಾಟ್. ಅತ್ಯಂತ ಪ್ರಖ್ಯಾತನಾಗಿ, ತ್ಯಾಗವೇ ಮೂರ್ತಿವೆತ್ತಾಗಿ ಬಾಳಿದ ಭೂಮಂಡಲಾಧೀಶನ ಮಹಾಪ್ರಸ್ಥಾನಕ್ಕೆ ಸಾಕ್ಷಿ. "ವಿವೇಶ ವೈಷ್ಣವಂ ತೇಜಃ ಸಶರೀರಃ ಸಹಾನುಜಃ".

ಶ್ರೀರಾಮನನ್ನು ತಬ್ಬಿ ತನ್ನೆಡೆಗೆ ಸೆಳೆದುಕೊಂಡು ವೈಷ್ಣವ ತೇಜಸ್ಸನ್ನು ಪ್ರವೇಶಿಸುವಂತೆ ಮಾಡಿದ ಸರಯೂ ತೀರ.

ಮಾನವ ಜೀವನದ ರಥವನ್ನು ಏರಿ ಗೀರ್ವಾಣರ ಮನೋಕಾಂಕ್ಷೆಯನ್ನು ಪೂರ್ಣಗೊಳಿಸಿದ ಶ್ರೀರಾಮ, ಭೂಲೋಕವನ್ನು ತೊರೆದು ತನ್ನ ಮೂಲ ನಿವಾಸವಾದ ವೈಕುಂಠಕ್ಕೆ ತೆರಳಲು ಜಲ ಸಮಾಧಿಯನ್ನು ಪ್ರವೇಶಿಸಿದ ಪುಣ್ಯ ತೀರ.

ತತಃ ಸೂಕ್ಷ್ಮಾಂಬರಧರೋ ಬ್ರಹ್ಮಮಾವರ್ತಯನ್ ಪರಮ್ ।

ಕುಶಾನ್ ಗೃಹೀತ್ವಾ ಪಾಣಿಭ್ಯಾಂ ಸರಯೂಂ ಪ್ರಯಯಾವಥಃ ॥

ಸಮಸ್ತವನ್ನೂ ತ್ಯಾಗ ಮಾಡಿ, ಧ್ಯಾನ ಮಾಡುತ್ತಾ ಬಂದ ಸಂಕೇತವಾಗಿ ಧನುಸ್ಸು ಬಾಣಗಳಿಲ್ಲದೇ ದರ್ಭೆಯನ್ನು ಹಿಡಿದಿರುವ, ರಾಮ ಸೀತೆಯೊಂದಿಗಿರುವ ಸುಂದರ ಪ್ರಶಾಂತ ಮಂದಿರ.

ದಶವರ್ಷ ಸಹಸ್ರಾಣಿ ದಶವರ್ಷ ಶತಾನಿ ಚ ।

ವತ್ಸ್ಯಾಮಿ ಮಾನುಷೇ ಲೋಕೇ ಪಾಲಯನ್ ಪೃಥಿವೀಮಿಮಾಮ್ ॥

ಎಂದು ಅಭಯವಿತ್ತು ಧರೆಗಿಳಿದ ಪರಮಾತ್ಮನು ಮಾನವ ರೂಪದಲ್ಲಿ ತಾನು ಸಂಕಲ್ಪಿಸಿಕೊಂಡ ಅವಧಿ ಪೂರ್ಣವಾದ ನಂತರ ಮಾಡಿದ ಮಹಾಪ್ರಸ್ಥಾನ. ಕೋಸಲಕ್ಕೆ ಕುಶನನ್ನೂ, ಉತ್ತರ ಕೋಸಲಕ್ಕೆ ಲವನನ್ನೂ ಪಟ್ಟಾಭಿಷಿಕ್ತರನ್ನಾಗಿ ಮಾಡಿ, ತನ್ನನ್ನು ಬಿಟ್ಟಿರದೆ ಅನುಸರಿಸಿದ ಪ್ರಜೆಗಳನ್ನೂ, ಪಶುಪಕ್ಷಿಗಳನ್ನೂ ತನ್ನೊಡನೆ ಮೋಕ್ಷಕ್ಕೆ ಕರೆದೊಯ್ದ ಅವತಾರ ಪರಿಸಮಾಪ್ತಿ.

ಭೇಜಿರೇ ಸರಯೂ ಸರ್ವೇ ಹರ್ಷಪೂರ್ಣಾಶ್ರುವಿಕ್ಲವಾಃ ।

ಅವಗಾಹಾಪ್ಸು ಯೋ ಯೋ ವೈ ಪ್ರಾಣಾಂಸ್ತ್ಯಕ್ತ್ವಾ ಪ್ರಹೃಷ್ಟವತ್ ॥

ಮಾನುಷಂ ದೇಹಮುತ್ಸೃಜ್ಯ ವಿಮಾನಂ ಸೋಧ್ಯರೋಹತ ।

ತಿರ್ಯಗ್ಯೋನಿಗತಾನಾಂ ಚ ಶತಾನಿ ಸರಯೂ ಜಲಮ್ ॥

ಸಂಪ್ರಾಪ್ಯ ತ್ರಿದಿವಂ ಜಗ್ಮುಃ ಪ್ರಭಾಸುರವಪೂಂಷಿ ತು ।

ದಿವ್ಯಾ ದಿವ್ಯೇನ ವಪುಷಾ ದೇವಾ ದೀಪ್ತಾ ಇವಾ ಭವನ್ ॥

ಗತ್ವಾ ತು ಸರಯೂತೋಯಂ ಸ್ಥಾವರಾಣಿ ಚರಾಣಿ ಚ ।

ಪ್ರಾಪ್ಯ ತತ್ತೋಯವಿಕ್ಲೇದಂ ದೇವಲೋಕಮುಪಾಗಮನ್ ॥

ತಸ್ಮಿನ್ನೈಪಿ ಸಮಾಪನ್ನಾ ಋಕ್ಷವಾನರ ರಾಕ್ಷಸಾಃ ।

ತೇಪಿ ಸ್ವರ್ಗಂ ಪ್ರವಿವಿಶುರ್ದೇಹಾನ್ ನಿಕ್ಷಿಪ್ಯ ಚಾಂಭಸಿ ॥

ಶ್ರೀರಾಮನನ್ನು ಅನುಸರಿಸಿದ ಪ್ರತಿಯೋರ್ವನು ಪರಮಾತ್ಮನ ದಿವ್ಯ ಸಾನ್ನಿಧ್ಯದಲ್ಲಿ ಐಕ್ಯರಾದಂತೆ ನಮಗೂ ಸಹ ಸಾನ್ನಿಧ್ಯ ಭಾಗ್ಯ ಲಭ್ಯವಾಗಲಿ, ರಾಮನ ಚರಣ ಕಮಲಗಳಲ್ಲಿ ನಿತ್ಯ ನಿರಂತರ

ಅನನ್ಯ ಭಕ್ತಿ ಉಂಟಾಗಲಿ, ಬುದ್ಧಿ ಶುದ್ಧವಾಗಲಿ, ವಿದ್ಯೆ ಅಭಿವೃದ್ಧಿಯಾಗಲಿ, ಭಕ್ತಿ ವೈರಾಗ್ಯ ಉಂಟಾಗಲಿ, ಅದರಿಂದ ಸರ್ವ ಸಂಪತ್ತು ಸಮೃದ್ಧಿಯಾಗಲಿ ಎಂದು ಪ್ರಾರ್ಥಿಸುತ್ತಾ **ಮಂಗಳಾಚರಣೆ.**




ನಮಾಮಿ ಭಕ್ತ ವತ್ಸಲಂ ಕೃಪಾಳು ಶೀಲ ಕೋಮಲಂ ।
ಭಜಾಮಿ ತೇ ಪದಾಂಬುಜಂ ಅಕಾಮಿನಾಂ ಸ್ವಧಾಮದಮ್ ॥
ನಿಕಾಮ ಶ್ಯಾಮ ಸುಂದರಂ ಭವಾಂಬುನಾಥ ಮಂದರಂ ।
ಪ್ರಫುಲ್ಲ ಕಂಜ ಲೋಚನಂ ಮದಾದಿ ದೋಷ ಮೋಚನಂ ॥
ಪ್ರಲಂಬ ಬಾಹು ವಿಕ್ರಮಮ್ ಪ್ರಭೋಪ್ರಮೇಯ ವೈಭವಮ್ ।
ನಿಷಂಗ ಚಾಯ ಸಾಯಕಂ ಧರಂ ತ್ರಿಲೋಕ ನಾಯಕಮ್ ॥
ದಿನೇಶ ವಂಶ ಮಂಡನಂ ಮಹೇಶ ಛಾಪ ಖಂಡನಂ ।
ಮುನೀಂದ್ರ ಸಂತ ರಂಜನಂ ಸುರಾರಿ ವೃಂದ ಭಂಜನಮ್ ॥
ಮನೋಜ ವೈರಿ ವಂದಿತಂ ಅಜಾದಿ ದೇವ ಸೇವಿತಂ ।
ವಿಶುದ್ಧ ಬೋಧ ವಿಗ್ರಹಂ ಸಮಸ್ತ ದೂಷಣಾಪಹಮ್ ॥
ನಮಾಮಿ ಇಂದಿರಾಪತಿಂ ಸುಖಾಕರಂ ಸತಾಂಗತಿಂ ।
ಭಜೇ ಸಶಕ್ತಿ ಸಾನುಜಂ ಶಚೀ ಪತಿ ಪ್ರಿಯಾನುಜಂ ॥
ತ್ವದಂಘ್ರಿ ಮೂಲ ಯೆ ನರಾಃ ಭಜಂತಿ ಹೀನ ಮತ್ಸರಾಃ ।
ಪತಂತಿ ನೋ ಭವಾರ್ಣವೆ ವಿತರ್ಕ ವೀಚಿ ಸಂಕುಲೇ ॥
ವಿವಿಕ್ತ ವಾಸಿನಃ ಸದಾ ಭಜಂತಿ ಮುಕ್ತಯೇ ಮುದಾ ।
ನಿರಸ್ಯ ಇಂದ್ರಯಾದಿಕಂ ಪ್ರಯಾಂತಿ ತೇ ಗತಿಂ ಸ್ವಕಂ ॥
ತಮೇಕಮದ್ಭುತಂ ಪ್ರಭುಂ ನಿರೀಹಮೀಶ್ವರಂ ವಿಭುಂ ।
ಜಗದ್ಗುರುಂ ಚ ಶಾಶ್ವತಂ ತುರೀಯಮೇವ ಕೇವಲಂ ॥
ಭಜಾಮಿ ಭಾವ ವಲ್ಲಭಂ ಕುಯೋಗಿನಾಂ ಸುದುರ್ಲಭಂ ।
ಸ್ವಭಕ್ತಕಲ್ಪ ಪಾದಪಂ ಸಮಂ ಸುಸೇವ್ಯಮನ್ವಹಂ ॥
ಅನೂಪ ರೂಪ ಭೂಪತಿಂ ನತೋಹಮುರ್ವಿಜಾ ಪತಿಂ ।
ಪ್ಸೀದ ಮೇ ನಮಾಮಿ ತೇ ಪದಾಬ್ಜ ಭಕ್ತಿ ದೇಹಿ ಮೇ ॥
ಪಠಂತಿ ಯೇ ಸ್ತವಂ ಇದಂ ನರಾದರೇಣ ತೇ ಪದಂ ।

ವ್ರಜಂತಿ ನಾತ್ರ ಸಂಶಯಂ ತ್ವದೀಯ ಭಕ್ತಿ ಸಂಯುತಾಃ ॥

ಮಂಗಳಂ ಕೌಸಲೇಂದ್ರಾಯ ಮಹನೀಯ ಗುಣಾತ್ಮನೇ ।

ಚಕ್ರವರ್ತಿ ತನೂಜಾಯ ಸಾರ್ವಭೌಮಾಯ ಮಂಗಳಮ್ ॥1 ॥

ವೇದವೇದಾಂತ ವೇದ್ಯಾಯ ಮೇಘಶ್ಯಾಮಲ ಮೂರ್ತಯೇ ।

ಪುಂಸಾಂ ಮೋಹನ ರೂಪಾಯ ಪುಣ್ಯಶ್ಲೋಕಾಯ ಮಂಗಳಂ॥

ವಿಶ್ವಾಮಿತ್ರಾಂತರಂಗಾಯ ಮಿಥಿಲಾ ನಗರೀ ಪತೇ ।

ಭಾಗ್ಯಾನಾಂ ಪರಿಪಾಕಾಯ ಭವ್ಯರೂಪಾಯ ಮಂಗಳಮ್ ॥ 3 ॥

ಪಿತೃಭಕ್ತಾಯ ಸತತಂ ಭಾತೃಭಿಃ ಸಹ ಸೀತಯಾ ।

ನಂದಿತಾಖಿಲ ಲೋಕಾಯ ರಾಮಭದ್ರಾಯ ಮಂಗಳಮ್ ॥ 4 ॥

ತ್ಯಕ್ತ ಸಾಕೇತ ವಾಸಾಯ ಚಿತ್ರಕೂಟ ವಿಹಾರಿಣೇ ।

ಸೇವ್ಯಾಯ ಸರ್ವಯಮಿನಾಂ ಧೀರೋದಾತ್ತಾಯ ಮಂಗಳಮ್ ॥ 5 ॥

ಸೌಮಿತ್ರಿಣಾಚ ಜಾನಕ್ಯಾಚಾಪ ಬಾಣಾಸಿ ಧಾರಿಣೇ ।

ಸಂಸೇವ್ಯಾಯ ಸದಾ ಭಕ್ತ್ಯಾ ಸ್ವಾಮಿನೇ ಮಮ ಮಂಗಳಮ್ ॥ 6 ॥

ದಂಡಕಾರಣ್ಯ ವಾಸಾಯ ಖರದೂಷಣ ಶತ್ರವೇ ।

ಗೃಧ್ರರಾಜಾಯ ಭಕ್ತಾಯ ಮುಕ್ತಿ ದಾಯಾಸ್ತು ಮಂಗಳಮ್ ॥ 7 ॥

ಸಾದರಂ ಶಬರೀ ದತ್ತ ಫಲಮೂಲ ಭಿಲಾಷಿಣೇ ।

ಸೌಲಭ್ಯ ಪರಿಪೂರ್ಣಾಯ ಸತ್ಯೋದ್ರಿಕ್ತಾಯ ಮಂಗಳಮ್ ॥ 8 ॥

ಹನುಮತ್ಸಮವೇತಾಯ ಹರೀಶಾಭೀಷ್ಟ ದಾಯಿನೇ ।

ವಾಲಿ ಪ್ರಮಥನಾಯಾಸ್ತು ಮಹಾಧೀರಾಯ ಮಂಗಳಮ್ ॥ 9 ॥

ಶ್ರೀಮತೇ ರಘುವೀರಾಯ ಸೇತೂಲ್ಲಂಘಿತ ಸಿಂಧವೇ ।

ಜಿತರಾಕ್ಷಸ ರಾಜಾಯ ರಣಧೀರಾಯ ಮಂಗಳಮ್ ॥ 10 ॥

ವಿಭೀಷಣಕೃತೇ ಪ್ರೀತ್ಯಾ ಲಂಕಾಭೀಷ್ಟ ಪ್ರದಾಯಿನೇ ।

ಸರ್ವಲೋಕ ಶರಣ್ಯಾಯ ಶ್ರೀರಾಘವಾಯ ಮಂಗಳಮ್ ॥ 11 ॥

ಆಗತ್ಯನಗರೀಂ ದಿವ್ಯಾಮಭಿಷಿಕ್ತಾಯ ಸೀತಯಾ ।

ರಾಜಾಧಿರಾಜರಾಜಾಯ ರಾಮಭದ್ರಾಯ ಮಂಗಳಮ್ ॥ 12 ॥

ಬ್ರಹ್ಮಾದಿ ದೇವಸೇವ್ಯಾಯ ಬ್ರಹ್ಮಣ್ಯಾಯ ಮಹಾತ್ಮನೇ ।

ಜಾನಕೀ ಪ್ರಾಣನಾಥಾಯ ರಘುನಾಥಾಯ ಮಂಗಳಮ್ ॥ 13 ॥

ಶ್ರೀಸೌಮ್ಯ ಜಾಮಾತೃಮುನೇಃ ಕೃಪಯಾಸ್ಮಾನು ಪೇಯುಷೇ ।
ಮಹತೇ ಮಮ ನಾಥಾಯ ರಘುನಾಥಾಯ ಮಂಗಳಮ್ ॥ 14 ॥
ಮಂಗಳಾಶಾಸನ ಪರೈರ್ಮದಾಚಾರ್ಯ ಪುರೋಗಮೈಃ ।
ಸರ್ವೈಶ್ಚ ಪೂರ್ವೈರಾಚಾರ್ಯೈಃ ಸತ್ಕೃತಾಯಾಸ್ತು ಮಂಗಳಮ್ ॥ 15 ॥
ರಮ್ಯಜಾ ಮಾತೃ ಮುನಿನಾ ಮಂಗಳಾಶಾಸನಂ ಕೃತಮ್ ।
ತ್ರೈಲೋಕ್ಯಾಧಿಪತಿಃ ಶ್ರೀಮಾನ್ ಕರೋತು ಮಂಗಳಂ ಸದಾ ॥

ರಾಮಚಂದ್ರಾಯ ಜನಕರಾಜಜಾ ಮನೋಹರಾಯ
ಮಾಮಕಾಭೀಷ್ಟದಾಯ ಮಹಿತ ಮಂಗಳಮ್ ॥
ಕೋಸಲೇಶಾಯ ಮಂದಹಾಸ ದಾಸಪೋಷಣಾಯ
ವಾಸವಾದಿ ವಿನುತ ಸದ್ವರದ ಮಂಗಳಮ್ ॥ 1 ॥
ಚಾರು ಕುಂಕುಮೋ ಪೇತ ಚಂದನಾದಿ ಚರ್ಚಿತಾಯ
ಹಾರಕಟಕ ಶೋಭಿತಾಯ ಭೂರಿ ಮಂಗಳಮ್ ॥ 2 ॥
ಲಲಿತ ರತ್ನಕುಂಡಲಾಯ ತುಲಸೀವನಮಾಲಿಕಾಯ
ಜಲದ ಸದೃಶ ದೇಹಾಯ ಚಾರು ಮಂಗಳಮ್ ॥ 3 ॥
ದೇವಕೀಪುತ್ರಾಯ ದೇವ ದೇವೋತ್ತಮಾಯ
ಚಾಪ ಜಾತ ಗುರು ವರಾಯ ಭವ್ಯ ಮಂಗಳಮ್ ॥ 4 ॥
ಪುಂಡರೀಕಾಕ್ಷಾಯ ಪೂರ್ಣಚಂದ್ರಾನನಾಯ
ಅಂಡಜಾತವಾಹನಾಯ ಅತುಲ ಮಂಗಳಮ್ ॥ 5 ॥
ವಿಮಲರೂಪಾಯ ವಿವಿಧ ವೇದಾಂತವೇದ್ಯಾಯ
ಸುಜನ ಚಿತ್ತ ಕಾಮಿತಾಯ ಶುಭಗ ಮಂಗಳಮ್ ॥ 6 ॥
ರಾಮದಾಸ ಮೃದುಲ ಹೃದಯ ತಾಮರಸ ನಿವಾಸಾಯ
ಸ್ವಾಮಿ ಭದ್ರಗಿರಿವರಾಯ ಸರ್ವ ಮಂಗಳಮ್ ॥ 7 ॥

**॥ ಜೈ ಶ್ರೀರಾಮ್ ಜೈ ಜೈ ಶ್ರೀರಾಮ್ ॥**